ಗೊತ್ತಿಲ್ಲ. ಅದರಲ್ಲಿ ವ್ಯತ್ಯಾಸವಿದ್ದರೆ ವಿಚಾರ ಮಾಡೋಣ. ಆದರೆ ನಮಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಅವರು ಈ ವರ್ಗಕ್ಕೆ ಬೆಳಗಿನ ಕ್ಲಾಸ್‌ಗಳಿಗೆ ಹೋಗುತ್ತಿದ್ದರು. ಆಮೇಲೆ ಈ ಕೋರ್ಸ್ ಆ ಕಾಲೇಜಿನಲ್ಲಿ ಏಳೂವರೇ ಗಂಟೆಯಿಂದ ಹತ್ತೂವರೆ ಗಂಟೆಯವರೆಗೆ ನಡೆಯುತ್ತಿದ್ದು ಸಂಬಂಧಪಟ್ಟ ಶ್ರೀ ಮಲ್ಲಿಕಾರ್ಜುನ್‌ರವರು ಈ ತರಗತಿಗಳಿಗೆ ಹಾಜರಾಗಿದ್ದರೆಂದು ನಮ್ಮ ಮಾಹಿತಿ ಇದೆ. ಈ ತರಗತಿಯ ಹಾಜರಾತಿ ಎಲ್ಲಾ ಮೂರು ವರ್ಷಗಳಲ್ಲಿ ಸುಮಾರು ಶೇಕಡಾ 75 ಇರುತ್ತದೆ. ಆಮೇಲೆ ಪರೀಕ್ಷೆಯಲ್ಲಿ ತೆಗೆದುಕೊಂಡಿರುವ ಸಮಯ. ಅವರ ಲೆಕ್ಕದಲ್ಲಿರುತಕ್ಕಂಥ ರಜೆಯನ್ನು ಪಡೆದುಕೊಂಡು ಪರೀಕ್ಷೆಯಲ್ಲಿ ಹಾಜರಾಗಿದ್ದಾರೆ. ಆದ್ದರಿಂದ ನಮ್ಮ ಮಾಹಿತಿ ಪ್ರಕಾರ ಇದು ಸರಿಯಾಗಿರುತ್ತದೆ. ಇದರಲ್ಲಿ ಯಾವ ವ್ಯತ್ಯಾಸವೂ ಕಾಣುವುದಿಲ್ಲ ಮತ್ತು ಲೋಪವೂ ಕಾಣುವುದಿಲ್ಲ. ಇದಕ್ಕೆ ವಿರುದ್ಧವಾದ ಮಾಹಿತಿ ತಮ್ಮಲ್ಲಿದ್ದರೆ ನಾವು ಅದನ್ನು ವಿಚಾರ ಮಾಡುತ್ತೇವೆ.

SRI C.V. VENKATARAYAPPA : Did the University permit the course to the day college or evening college?

ಶ್ರೀ ಎಂ. ವೀರಪ್ಪ ಮೊಯಿಲಿ : ಬೆಳಗಿನ ಕಾಲೇಜು ಅಂದರೆ ಏಳೂವರೆ ಗಂಟೆಯಿಂದ ಹತ್ತುವರೆ ಗಂಟೆವರೆಗೆ ನಡೆಯುವ ಬೆಳಗಿನ ಈ ಕೋರ್ಸ್‌ಗಳಿಗೆ ಅಟೆಂಡ್ ಆಗಿದ್ದಾರೆ. ಆಮೇಲೆ ಕಚೇರಿಗಳು ಪ್ರಾರಂಭವಾಗುತ್ತವೆ, ಅಲ್ಲಿಗೆ ಹೋಗಿದ್ದಾರೆ. ಆದ್ದರಿಂದ ಇದಕ್ಕೆ ಓವರ್‌ಲ್ಯಾಪಿಂಗ್ ಟೈಮಿಂಗ್ ಏನೂ ಇಲ್ಲ.

SRI C.V. VENKATARAYAPPA : Between what hours did the college run?

SRI M. VEERAPPA MOILY : I don't know, According to me the course which he attended was running from 7.30 A.M. to 10.30 A.M. ತಮ್ಮ ಹತ್ತಿರ ಮಾಹಿತಿ ಇದ್ದರೆ ದಯವಿಟ್ಟು ಬನ್ನಿ, ನಾವು ವಿಚಾರ ಮಾಡೋಣ, ತನಿಖೆ ಮಾಡೋಣ.

ಸುಳ್ಯದಲ್ಲಿ ಮೇಲ್ದರ್ಜೆ ಪ್ರಾಥಮಿಕ ಆರೋಗ್ಯ ಕೇಂದ್ರ

506 - ಶ್ರೀ ಕೆ. ಕುಶಾಲ. (ಸುಳ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನ ಮೇಲ್ದರ್ಜೆ ಪ್ರಾಥಮಿಕ ಆರೋಗ್ಯ ಕೇಂದ್ರವು ಯಾವ ವರ್ಷದಲ್ಲಿ ಮಂಜೂರಾಯಿತು ಹಾಗೂ ಈ ಮೇಲ್ದರ್ಜೆ ಪ್ರಾಥಮಿಕ ಆರೋಗ್ಯ ಕೇಂದ್ರದ ನಿಯಮಗಳು ಏನು?

ಆ) ಸದರಿ ಮೇಲ್ದರ್ಜೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಿಯಮದಂತೆ ಇರಬೇಕಾದ ಹಾಸಿಗೆಗಳ ಸಂಖ್ಯೆ ಹಾಗೂ ಇರುವ ಹಾಸಿಗೆಗಳ ಸಂಖ್ಯೆ ಎಷ್ಟು?

ಇ) ಸರ್ಕಾರಿ ನಿಯಮದಂತೆ ಈ ಆರೋಗ್ಯ ಕೇಂದ್ರಕ್ಕೆ 30 ಹಾಸಿಗೆಗಳನ್ನು, ಕೇಂದ್ರ ಶುಶ್ರೂಷಕ ಹುದ್ದೆಯನ್ನು, ಇತರ ಸಿಬ್ಬಂದಿಯನ್ನು ನೀಡಲಾಗಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರವು 30 ಹಾಸಿಗೆಯ ಕೊಠಡಿಯ ಕಟ್ಟಡವು ಹಾಗೂ ಈ ತನಕ ಮಂಜೂರಾತಿ ಇಲ್ಲದ ಕೇಂದ್ರ ಶುಶ್ರೂಷಕಿ ಹುದ್ದೆಗಳಿಗೆ ಮಂಜೂರಾತಿ ನೀಡಲು ಕ್ರಮ ಕೈಗೊಳ್ಳುವುದೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು) :

ಅ) 1980. ಈ ಆಸ್ಪತ್ರೆಗೆ ನಿಯಮದ ಪ್ರಕಾರ ಅಂದರೆ ಹೊಸ ಕಟ್ಟಡವು ಪೂರ್ಣಗೊಂಡ ನಂತರ 30 ಹಾಸಿಗೆಗಳ ಆಸ್ಪತ್ರೆಗೆ ನಾರ್ಮ್ಸ್ ಪ್ರಕಾರ ಬೇಕಾಗುವ ಹೆಚ್ಚುವರಿ ಸಿಬ್ಬಂದಿ, ಆಹಾರ, ರೂ. 1.00 ಲಕ್ಷದಷ್ಟು ಔಷಧ, ಬೆಡ್ಡಿಂಗ್ ಲಿನನ್ ಹಾಗೂ ಉಪಕರಣಗಳನ್ನು ಒದಗಿಸಬೇಕಾಗುವುದು.

ಆ) ನಿಯಮದಂತೆ ಇರಬೇಕಾದ ಹಾಸಿಗೆಗಳ ಸಂಖ್ಯೆ : 30. ಈಗ ಹಾಲಿ ಇರುವ ಹಾಸಿಗೆಗಳ ಸಂಖ್ಯೆ 6.

ಇ) ಇಲ್ಲ.

ಈ) 30 ಹಾಸಿಗೆಯ ಕಟ್ಟಡವು ಪೂರ್ಣಗೊಂಡಿದ್ದು, ನಿಯಮಾನುಸಾರ ಹೆಚ್ಚಿನ ಸಿಬ್ಬಂದಿಯನ್ನು ಮಂಜೂರು ಮಾಡುವ ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಕೆ. ಕುಶಾಲ : ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನಲ್ಲಿರುವ ಆಸ್ಪತ್ರೆಯನ್ನು ಮೇಲೆ ದರ್ಜೆಗೆ ಏರಿಸಿ ಸುಮಾರು 11 ವರ್ಷಗಳಾಗಿದ್ದರೂ ಅಲ್ಲಿಗೆ ಸಿಬ್ಬಂದಿ ವರ್ಗದವರನ್ನು ನೇಮಕಾತಿ ಮಾಡಿಲ್ಲ, ಈ ಆಸ್ಪತ್ರೆಯ ಕಾರ್ಯಕ್ಷೇತ್ರದಲ್ಲಿ ಮಹಿಳಾ ಶುಶ್ರೂಷಕಿ ಮತ್ತ ಪುರುಷ ಶುಶ್ರೂಷಕ ಹುದ್ದೆಯನ್ನು ಸರ್ಕಾರದವರು ಮಂಜೂರು ಮಾಡಿರುವುದಿಲ್ಲ ಮತ್ತು ನೇಮಕಾತಿ ಮಾಡಿರುವುದಿಲ್ಲ, ಇತ್ತೀಚೆಗೆ ಮಂಜೂರಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕಾದರೂ ಒಂದು ಶುಶ್ರೂಷಕಿಯ ಹುದ್ದೆಯನ್ನು ಕೊಡುವಂಥ ಕ್ರಮ ಇದೆಯೇ? ಈ ಒಂದು ಹುದ್ದೆಯನ್ನು ಕೊಟ್ಟು ಭರ್ತಿ ಮಾಡಬೇಕು ಮತ್ತು ಈ ಮೇಲ್‌ದರ್ಜೆಗೆ ಏರಿಸಲ್ಪಟ್ಟಿರುವ ಆಸ್ಪತ್ರೆಯಲ್ಲಿ ಹೆಚ್ಚಿನ ಸಿಬ್ಬಂದಿಗಳನ್ನು ಇನ್ನು ಎಷ್ಟು ಸಮಯಲ್ಲಿ ಭರ್ತಿ ಮಾಡಲಾಗುತ್ತದೆಂದು ಕೇಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಅಧ್ಯಕ್ಷರೇ ಈ ಆಸ್ಪತ್ರೆಯನ್ನು ಮಂಜೂರು ಮಾಡಿರುವುದು ನಿಜ. ಈಗ ಕಟ್ಟಡವೂ ಮುಗಿದಿದೆ. ಈ ಕೂಡಲೆ ಅದಕ್ಕೆ ತಕ್ಕಂಥ ಎಲ್ಲ ಸಿಬ್ಬಂದಿಯನ್ನು ಮತ್ತು ಬಾಕಿ ಎಲ್ಲ ವರ್ಗದ ಸಿಬ್ಬಂದಿಗಳನ್ನು ನಾವು ನೇಮಕ ಮಾಡಿಕೊಡುತ್ತೇವೆ.

ಗ್ರಾಮಾಂತರ ಪ್ರದೇಶದಲ್ಲಿ ಔಷಧಿಗಳು ದೊರೆಯದಿರುವುದು

311 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಿಗೆ ಔಷಧ ಸರಬರಾಜು ಮಾಡುವ ಸಲುವಾಗಿ ಕೊಟ್ಟಿರುವ ಹಣದ ಪ್ರಮಾಣವೆಷ್ಟು (ಬೀದರ್ ಜಿಲ್ಲೆಯಲ್ಲಿ ಬರುವ ಗ್ರಾಮಾಂತರ ಆಸ್ಪತ್ರೆಗಳಿಗೆ ಕೊಟ್ಟಿರುವ ಹಣದ ವಿವರಗಳನ್ನು ನೀಡುವುದು)?

ಆ) ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜನ್ನು ಸೂಕ್ತವಾಗಿ ಪೂರೈಸುತ್ತಿದ್ದರೂ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆಗಳಲ್ಲಿ ಔಷಧಿಗಳು ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀಮತಿ ಕೆ. ಎಸ್.ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರೂ 572.66 ಲಕ್ಷಗಳು